ಪಿ. ಡಬ್ಲ್ಯೂಃ 01

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.

**ಓ.ಎಸ್. 102/2018**

ದಿಃ 03.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಎಸ್.ವೈ ವಕೀಲರಿಂದಃ

ನಾನು ದಾವೆಯನ್ನು ಭದ್ರಿನಾಥ್ ತಂದೆ ಕೃಷ್ಣ, ಎಂ.ಪಿ. ಜಾರ್ಜ್, ದಿವ್ಯ, ಮರಿಯಂ ಚಾಂಡಿ ಎಂಬುವವರ ವಿರುದ್ಧ ಹೂಡಿರುತ್ತೇನೆ. ದಾವೆಯನ್ನು ವಿಭಾಗ ಕೋರಿ ಹೂಡಿರುತ್ತೇನೆ. ದಾವೆಯನ್ನು ಸರ್ವೆ ನಂ. 88/1 ಮತ್ತು 85/1 ಜಮೀನಿಗೆ ಸಂಬಂಧಪಟ್ಟು ಹೂಡಿರುತ್ತೇನೆ. ವಾದ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ವಾದ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ . ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳ ಕುರಿತು ನಾನು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ ಸರ್ವೆ ನಂ. 85/1 ನಾರಾಯಣಸ್ವಾಮಿ ಎನ್ನುವವರ ಹೆಸರಿನಲ್ಲಿ ಮತ್ತು ಸರ್ವೆ ನಂ. 88/1 ಎಂ.ಪಿ. ಜಾರ್ಜ್, ಮರಿಯಂ ಚಾಂಡಿ, ಅಲೆಕ್ಸಾಂಡರ್, ಇಬ್ರಾಹಿಂ ಎನ್ನುವವರ ಹೆಸರಿನಲ್ಲಿರುತ್ತದೆ. ಸದರಿಯವರಿಗೆ ಸರ್ವೆ ನಂ. 88/1 ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ.

ಈ ಸಮಯದಲ್ಲಿ ಶ್ರೀ ಬಿ.ಎಸ್.ವೈ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.